| | | | | | |
|---|---|---|---|---|---|
| 9. | D. Kannada | 26,63,80,066 | 12,09,29,322 | 72,93,893 | 39,46,03,281 |
| 10. | Dharwar | 2,45,98,060 | 2,79,66,670 | 21,38,869 | 5,47,03,599 |
| 11. | Gulbarga | 3,38,65,697 | 5,24,02,526 | 20,21,140 | 8,82,89,363 |
| 12. | Hassan | 4,11,69,819 | 1,88,81,414 | 22,61,557 | 6,23,12,790 |
| 13. | Kolar | 3,59,62,389 | 1,52,29,477 | 11,75,044 | 5,23,66,910 |
| 14. | Kodagu | 3,41,80,041 | 1,85,99,437 | 5,70,070 | 5,33,49,548 |
| 15. | Mandya | 7,24,00,768 | 4,23,46,021 | 18,95,643 | 11,66,42,432 |
| 16. | Mysore | 8,45,35,547 | 1,20,92,875 | 70,20,510 | 10,36,48,932 |
| 17. | Raichur | 2,81,27,486 | 2,55,75,831 | 11,97,545 | 5,49,00,862 |
| 18. | Shimoga | 5,43,67,490 | 1,32,59,734 | 7,76,895 | 6,84,04,119 |
| 19. | Tumkur | 2,11,03,285 | 1,66,29,443 | 42,34,772 | 4,19,67,500 |
| 20. | U. Kannada | 2,41,20,063 | – | – | 2,41,20,063 |
| | | 115,11,63,583 | 42,67,22,488 | 4,62,70,640 | 162,41,56,711 |

## ಮಲೆನಾಡು ಅಭಿವೃದ್ಧಿ ಮಂಡಳಿಗೆ ಖರ್ಚಾದ ಹಣ

**1275 (2082):** ಮಂಜುನಾಥ. ಸಿ. ಕುನ್ನೂರು (ಶಿಗ್ಗಾಂವ್):–

ಮಾನ್ಯ ಪರಿಸರ ಮತ್ತು ಜೀವ ಪರಿಸರ ಶಾಸ್ತ್ರ ಹಾಗೂ ವಿಜ್ಞಾನ, ತಂತ್ರಜ್ಞಾನ ಮತ್ತು ಮಲೆನಾಡು ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮಲೆನಾಡು ಅಭಿವೃದ್ಧಿ ಮಂಡಳಿಯನ್ನು ಎಂದು ರಚಿಸಲಾಯಿತು;

ಆ. ಇದಕ್ಕಾಗಿ ಸರ್ಕಾರದಿಂದ ಈವರೆಗೂ ತೆಗೆದುಕೊಂಡ ಕಾರ್ಯಕ್ರಮಗಳೇನು;

ಇ. ಈ ಮಂಡಳಿಗೆ ಖರ್ಚು ಮಾಡಲಾಗಿರುವ ಹಣವೆಷ್ಟು ?

ಶ್ರೀ ಎನ್.ಜಿ. ಹಾಲಪ್ಪ (ಪರಿಸರ ಮತ್ತು ಜೀವ ಪರಿಸರ ಶಾಸ್ತ್ರ ಹಾಗೂ ವಿಜ್ಞಾನ, ತಂತ್ರಜ್ಞಾನ ಮತ್ತು ಮಲೆನಾಡು ಅಭಿವೃದ್ಧಿ ರಾಜ್ಯ ಸಚಿವರು):–

ಅ. 10.3.93.

ಆ. ಯಾವುದೂ ಇಲ್ಲ.

ಇ. 5.00 ಲಕ್ಷ ರೂ.ಗಳು.

## ಕೆಮ್ಮಣ್ಣುಗುಂಡಿ ಗಿರಿಧಾಮದಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಹೋಟೆಲ್

**1276 (1110):** ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೇನರಸೀಪುರ):–

ಮಾನ್ಯ ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕೆಮ್ಮಣ್ಣುಗುಂಡಿ ಗಿರಿಧಾಮದಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ

ಹೋಟೆಲ್ – ಉಪಹಾರ ಗೃಹ ಇದೆಯೇ;

ಆ. ಇದ್ದಲ್ಲಿ, ಎಷ್ಟು ಕೊಠಡಿಗಳಿವೆ;

ಇ. ಇಲ್ಲದಿದ್ದಲ್ಲಿ, ಕೆಮ್ಮಣ್ಣುಗುಂಡಿ ಗಿರಿಧಾಮದಲ್ಲಿ ಹೋಟೆಲೊಂದನ್ನು ಕಟ್ಟುವ ಉದ್ದೇಶವಿದೆಯೇ ?

ಶ್ರೀ ಪೆರಿಕಲ್ ಎಂ. ಮಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು):–

ಅ. ಇಲ್ಲ.

ಆ. ಉದ್ಭವಿಸುವುದಿಲ್ಲ.

ಇ. ಕೇಂದ್ರದ ನೆರವು ಯೋಜನೆಯಡಿಯಲ್ಲಿ ಪ್ರವಾಸೋದ್ಯಮ ಇಲಾಖೆಯು ಕೆಮ್ಮಣ್ಣುಗುಂಡಿಯಲ್ಲಿ ಹಿಲ್ ಕಾಟೇಜುಗಳ ನಿರ್ಮಾಣವನ್ನು ಕೈಗೊಂಡಿದೆ.

## ಮಾನವ ಹಕ್ಕುಗಳ ಆಯೋಗ ರಚನೆ

**1280 (1894):** ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೇನರಸೀಪುರ):–

ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಇತ್ತೀಚೆಗೆ ದೆಹಲಿಯಲ್ಲಿ ನಡೆದ ಮುಖ್ಯ ಮಂತ್ರಿಗಳ ಸಭೆಯಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಬಗ್ಗೆ ಪರಿಶೀಲಿಸಲು ಪ್ರತಿ ರಾಜ್ಯದಲ್ಲಿಯೂ ಮಾನವ ಹಕ್ಕುಗಳ ಆಯೋಗವನ್ನು ರಚಿಸಲು ನಿರ್ಣಯ ತೆಗೆದುಕೊಳ್ಳಲಾಯಿತೇ;

ಆ. ಹಾಗಿದ್ದಲ್ಲಿ, ರಾಜ್ಯ ಸರ್ಕಾರವು ಮಾನವ ಹಕ್ಕುಗಳ ಆಯೋಗವನ್ನು ರಚಿಸಲು ಉದ್ದೇಶಿಸಿದೆಯೇ;

ಇ. ಹಾಗಿದ್ದಲ್ಲಿ, ಅದನ್ನು ಯಾವಾಗ ರಚಿಸಲಾಗುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):–

ಅ. ಇಲ್ಲ.

ಆ. ಪರಿಶೀಲನೆಯಲ್ಲಿದೆ.

ಇ. ಸೂಕ್ತ ಸಮಯದಲ್ಲಿ ರಚಿಸಲಾಗುವುದು.

## ಅನುಕಂಪದ ಆಧಾರದಲ್ಲಿ ನೇಮಕ ಹೊಂದಿರುವವರ ಸಂಖ್ಯೆ

**1281 (702)** ಶ್ರೀಮತಿ ಸುಮಾ ವಸಂತ (ವೀರಾಜಪೇಟೆ):–

ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕಳೆದ ಮೂರು ವರ್ಷಗಳಲ್ಲಿ ವಿದ್ಯುತ್, ಕಂದಾಯ, ಗೃಹ ಮತ್ತು ಅರಣ್ಯ ಇಲಾಖೆಯಲ್ಲಿ, ಸೇವೆಯಲ್ಲಿ ಇರುವಾಗ ಮಡಿದಿರುವವರ ಸಂಖ್ಯೆ ಎಷ್ಟು;

ಆ. ಇದರಲ್ಲಿ ಮಡಿದಿರುವವರ ಸಂಬಂಧಿಕರಿಗೆ ಅಥವಾ ಮಕ್ಕಳಿಗೆ ಎಷ್ಟು ಜನರಿಗೆ ಮೇಲೆ ತಿಳಿಸಿದ